(MESSAGE FROM THE LEGISLATIVE COUNCIL-ANNOUNCEMENT)

MADAM SPEAKER:—I have received two communications from the Chairman, Mysore Legislative Council; I have to bring them to the notice of the House, and they read thus.

"Madam Speaker, 29th May 1973.

As required by Rule 106 of the Rules of Procedure and Conduct of Business in the Mysore Legislative Council, I retransmit the follo wing Bills without any amendments from the Council.

(i) The Mysore Agricultural Debtors (Temporary Protection) Bill 1973.-Passed on 24-5-1973.

(ii) The Charitable Endowments (Mysore Amendment) Bill, 1973, Passed on 24th May 1973.

(iii) The Mysore Co-operative Societies (Amendment) Bill, 1973. Passed on 24th May 1973.

(iv) The Mysore High Court (Amendment) Bill, 1973. Passed on 29th May 1973.

Yours faithfuly,
Sd. Chairman.

I read the Second Coumunication :—

Madam Speaker, 29th May 1973.

As required by Rule 107 of the Rules of Procedure and Conduct of Business in the Mysore Legislative Council I retransmit the following Bills without any recommendations from the Council.

(1) The Mysore Appropriation (No. 2) Bill, 1973. Passed on 23rd May 1973.

(2) The Mysore Appropriation (No. 3) Bill. 1973. Passed on 28th May 1973.

Alleged Police Excesses in Bangalore

ಶ್ರೀ ಎಚ್. ಎಸ್. ಸಿದ್ದಪ್ಪ.—ಬೆಂಗಳೂರು ಸಿಟಿಯ ಪೋಲೀಸರ ದುರ್ವರ್ತನೆಯ ಬಗ್ಗೆ ನಾವು ಇಲ್ಲಿ ಪದೇ ಪದೇ ಮನವಿ ಮಾಡುತ್ತಿದ್ದರೂ ಸಹ ಅದನ್ನು ಸರ್ಕಾರದವರು ಇನ್ನೂ ಕಂಟ್ರೋಲ್ ಮಾಡಿಲ್ಲ. ಇದಕ್ಕೆ ಉದಾಹರಣೆ ಎಂದರೆ, ನೆನ್ನೆ ದಿವಸ ಕೋಟೆ ಪ್ರೌಢಶಾಲೆಯ ಆವರಣದಲ್ಲಿ ಸನಾತನಧರ್ಮ ಪರಿಷತ್ ಸಭೆಯಂ ನಡೆಯುತ್ತಿದ್ದಾಗ ಅಲ್ಲಿ ಹಾಜರಿದ್ದ ಪತ್ರಿಕೋದ್ಯಮಿ ಒಬ್ಬರನ್ನು ಪೋಲೀಸರು ಮೊನ್ನೆ ಬ್ಲ್ಯಾಕ್-ಫ್ಲ್ಯಾಗ್ ಮಾಡಿದ್ದು ನೀನೇ ಎಂದು ಹೇಳಿ ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿದ್ದಾರೆ. ಜನರಿಗೆ ಇಲ್ಲದ ಹಿಂಸೆ ಕೊಡುವುದೇ ಈ ಪೋಲೀಸರ ಸನಾತನ ಧರ್ಮವಾಗಿಬಿಟ್ಟಿದೆ. ಇದನ್ನು ಸರ್ಕಾರದವರು ತೀವ್ರವಾಗಿ ಗಮನಿಸಿ ಪೋಲೀಸರನ್ನು ತಕ್ಕ ಬಂದೋಬಸ್ತಿನಲ್ಲಿಡಬೇಕು. ಸಂಬಂಧ ಇಲ್ಲದವರನ್ನೆಲ್ಲಾ ಹಿಡಿದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟು ಕಿರುಕುಳ ಕೊಡುತ್ತಿದ್ದಾರೆ.

ಶ್ರೀ ಡಿ. ಕೆ. ನಾಯ್ಕರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಆ ಬಗ್ಗೆ ಏನಾದರೂ ಕಾಂಕ್ರೀಟ್ ಎಗ್‌ಜಾಂಪಲ್ ಇದ್ದರೆ ಕೊಡಿ ; ತನಿಖೆ ಮಾಡಿಸುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಹಿಂದೂ ಪತ್ರಿಕೆಯ ಒಬ್ಬರು ವರದಿಗಾರರನ್ನು ಪೋಲೀಸರು ಆ ಸಭೆಯಿಂದ ಹೊರಗೆ ಕರೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟಿದ್ದರು. ನಂತರ ಬೇರೆ ಪತ್ರಿಕೆಯವರು ಹೋಗಿ ಬಿಡಿಸಿಕೊಂಡು ಬಂದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಬ್ರಾಹ್ಮಣರ ಸಮ್ಮೇಳನ ನಡೆದಾಗ ಕೆಲವರು ಬ್ಲಾಕ್ ಫ್ಲಾಗ್ ಡೆಮಾನ್‌ಸ್ಟ್ರೇಷನ್ ನಡೆಸಿದಾಗ ಮತ್ತೆ ಕೆಲವರು ಅವರನ್ನು ಹಿಡಿದುಕೊಂಡು ಹೊಡೆದರು. ಆ ಸಮಯದಲ್ಲಿ ಪೋಲೀಸರು ಅಲ್ಲಿ ಹಾಜರಿದ್ದರೂ ಸಹ ಹೊಡೆದವರ ವಿರುದ್ಧ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ ಎಂದರೆ ನಾಚಿಕೆ ಪಡಬೇಕು. ಬ್ಲಾಕ್ ಫ್ಲಾಗ್ ಡೆಮಾನ್‌ಸ್ಟ್ರೇಷನ್ ಮಾಡುವುದಕ್ಕೆ ಎಲ್ಲರಿಗೂ ಅಧಿಕಾರವಿದೆ. ಅದರಂತೆ ಮಾಡಿದಾಗ ಅವರನ್ನು ಹಿಡಿದುಕೊಂಡು ಹೊಡೆಯುವುದಕ್ಕೆ ಪೋಲೀಸರಿಗೆ ಆಗಲೀ, ಬೇರೆಯವರಿಗೆ ಆಗಲೀ ಅಧಿಕಾರವಿಲ್ಲ. ಇದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಡಬಾರದು ; ಪೋಲೀಸರೇನಾದರೂ ಇದೇ ರೀತಿ ನಡೆದುಕೊಂಡರೆ ನಾವು ಪ್ರತಿಭಟಿಸಬೇಕಾಗುತ್ತದೆ ಮತ್ತು ಅವರ ವಿರುದ್ಧ ತಿರುಗಿಸಬೇಕಾಗುತ್ತದೆಂದು ಹೇಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ತಮಗೆ ಸಮಕ್ಷಮ ಏನಾದರು ತಿಳಿವಳಿಕೆ ಇದ್ದರೆ ಹೇಳಿ ; ಕೇವಲ ಪೇಪರ್ ಓದಿ, ಅದರಲ್ಲಿ ಬಂದಿರುವುದು ಸರಿ ಎಂದು ನಂಬಿಕೊಂಡು ಹೇಳುವುದಾದರೆ ಅದಕ್ಕೆ ಉಪಾಯವಿಲ್ಲ. ಕಾಂಕ್ರೀಟ್ ಎಗ್‌ಜಾಂಪಲ್ ಇದ್ದರೆ ಕೊಡಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ಪತ್ರಿಕೆಯ ಆಧಾರದ ಮೇಲೆ ಹೇಳುತ್ತಿಲ್ಲ ; ನಾನು ಅಲ್ಲಿಯೇ ಇದ್ದೆ. ಉನ್ನತ ಪೋಲೀಸ್ ಅಧಿಕಾರಿಗಳು ಹೇಳಿದ ಮೇಲೆ ಅವರನ್ನು ಬಿಡುಗಡೆ ಮಾಡಿದರು. ಈ ರೀತಿ ಪೋಲೀಸರು ನಡೆದುಕೊಳ್ಳುವುದು ಸರಿಯಲ್ಲ. ಯಾವ ಪೋಲೀಸರು ಈ ರೀತಿ ನಡೆದುಕೊಂಡರು ಎಂದು ಹೇಳೋಣವೆಂದರೆ, ಅವರ ಡ್ರೆಸ್ ಮೇಲೆ ನಂಬರ್ ಪ್ಲೇಟ್ ಸಹ ಇರಲಿಲ್ಲ ;

ಶ್ರೀ ಡಿ. ಕೆ. ನಾಯ್ಕರ್.—ತಾವು ಒಂದು ರೆಪ್ರಸೆಂಟೇಷನ್ ಕೊಡಿ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಮಾನ್ಯ ಸದಸ್ಯರು ಜವಾಬ್ದಾರಿಯುತವಾಗಿ ಹೇಳುತ್ತಿರುವುದರಿಂದ ತಾವು ಆ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಿಸಬೇಕು.

Consequential difficulties due to permitting 9 Months Races in Bangalore

ಶ್ರೀ ಸಿ. ಬೈರೇಗೌಡ.—ಮಾನ್ಯ ನಾಗಣ್ಣನವರು ೫–೬ ದಿವಸಗಳ ಹಿಂದೆ ರೇಸ್ ವಿಚಾರ ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಅದನ್ನು ವಿಚಾರ ಮಾಡುವುದಾಗಿ ಹೇಳಿದ್ದರು. ೯ ತಿಂಗಳ ಕಾಲ ರೇಸ್ ನಡೆಸುವುದಕ್ಕೆ ಅನುಮತಿ ಕೊಟ್ಟಿರುವುದರಿಂದ ಸಾಮಾನ್ಯ ಪೆಂಗಸರ ಮಾಂಗಲ್ಯಕ್ಕೂ ಕಂತ್ರು ಬಂದಿದೆ. ಹೊರಗಿನಿಂದ ಬರುವವರಿಗೆ ಹೋಟೆಲ್‌ಗಳಲ್ಲಿ ಜಾಗ ಸಿಗುತ್ತಿಲ್ಲ ; ಟ್ಯಾಕ್ಸಿಗಳು ಸಿಗುತ್ತಿಲ್ಲ.

ಅಧ್ಯಕ್ಷರು.—ತಾವು ಆ ಬಗ್ಗೆ ನೋಟೀಸ್ ಕಳುಹಿಸಿಕೊಡಿ ; ಸರ್ಕಾರಕ್ಕೆ ಕಳಿಸಿಕೊಡುತ್ತೇನೆ. ಮುಖ್ಯಮಂತ್ರಿಗಳು ಇಲ್ಲದಿರುವಾಗ ತಾವು ಪ್ರಸ್ತಾಪ ಮಾಡಿದರೆ ಯಾರು ಉತ್ತರ ಕೊಡುತ್ತಾರೆ ?

Appointing Mysoreans by the Reserve Bank of India

ಶ್ರೀ ಕೊಣಂದೂರು ಲಿಂಗಪ್ಪ.—ನಾಳೆ ನಾಡಿದ್ದರಿಂದ ರಿಜರ್ವ್ ಬ್ಯಾಂಕ್‌ನವರು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳತ್ತಾರೆ. ೫೦೦ ರೂಪಾಯಿಗಳಿಗಿಂತ ಕಡಿಮೆ ಸಂಬಳ ಇದ್ದರೆ, ಅಂತಹ ಜಾಗಗಳಿಗೆ ಸ್ಥಳೀಯ ಜನರನ್ನೇ ನೇಮಕ ಮಾಡಿಕೊಳ್ಳಬೇಕೆಂಬ ನಿಯಮವನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ. ಈ ರೀತಿ ಕೇಂದ್ರ ಸರ್ಕಾರದ ಪಾಲಿಸಿ ಇದ್ದರೂ ಸಹ ರಿಜರ್ವ್ ಬ್ಯಾಂಕ್‌ನಲ್ಲಿ ಕನ್ನಡಿಗರಿಗೆ ಜಾಗ ಸಿಗುತ್ತಿಲ್ಲ. ಈ ರೀತಿ ನಮ್ಮ ರಾಜ್ಯದಲ್ಲಿಯೇ ಅನ್ಯಾಯವಾದರೆ ನಮ್ಮ ಜನರಂ ಎಲ್ಲಿಗೆ ಹೋಗಬೇಕು. ೯೦೦ ಜನರ ಪೈಕಿ ೩೦೦ ಜನರಿಗೆ ಮಾತ್ರ ಕೆಲಸ ಸಿಗುತ್ತದೆಂದು ಗೊತ್ತಾಗಿದೆ. ಇದೇ ಪರಿಸ್ಥಿತಿ ಮೈಸೂರು ಬ್ಯಾಂಕಿನಲ್ಲಿಯೂ ಬಂದಿದೆ. ಅಲ್ಲದೆ ಕೇಂದ್ರ ಸರ್ಕಾರದ ಕಾರ್ಖಾನೆಯಾದ ಎಚ್.ಎಂ.ಟಿ. ಯಲ್ಲಿಯೂ ಸಹ ೧೮ೆ ಜನರ ಪೈಕಿ ಕೇವಲ ೩ ಜನ ಕನ್ನಡಿಗರನ್ನು ತೆಗೆದುಕೊಂಡಿದ್ದಾರೆ, ೨೦೦ ರಿಂದ ೨೫೦ ರೂಪಾಯಿಗಳ ಸಂಬಳದ ಕೆಲಸಕ್ಕೂ ಸಹ ಕನ್ನಡಿಗರಿಗೆ ಪ್ರಾತಿನಿಧ್ಯ ಕೊಡುತ್ತಿಲ್ಲ. ಇಲ್ಲಿ ಸರ್ಕಾರದವರು ಹೇಳುವ ನೀತಿ ಒಂದಾದರೆ, ಅಲ್ಲಿನ ಅಧಿಕಾರಿಗಳು ವರ್ತಿಸುವ ಪರಿಯೇ ಬೇರೆಯಾಗಿದೆ. ಇಂತಹ ಅಧಿಕಾರಿಗಳನ್ನು ಸರ್ಕಾರದವರು ತರಾಟೆಗೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ಜನರು ಬದುಕುವುದಾದರೂ ಹೇಗೆ ? ಇಲ್ಲಿಯವರೆಗೆ